ಆ) ಬೆಳಗಾವಿ ವಿಭಾಗದಲ್ಲಿ ಬೊಂಬಾಯಿ ಪಬ್ಲಿಕ್ ಟ್ರಸ್ಟ್ ಕಾಯ್ದೆ 1950 ಜಾರಿಯಲ್ಲಿರುವುದರಿಂದ ಈ ವಿಭಾಗದ ಧಾರ್ಮಿಕ ಹಾಗೂ ಧರ್ಮಾದಾಯ ಸಂಸ್ಥೆಗಳು ಸದ್ರಿ ಕಾಯ್ದೆಯಡಿ ನೋಂದಣಿಯಾಗಬೇಕಾಗುವುದು ಅವಶ್ಯವಿದೆ. ಈ ಕಾಯ್ದೆಯಡಿ ಧರ್ಮದತ್ತಿ ಆಯುಕ್ತರು, ಬೆಳಗಾಂ ಇವರು ಮುಖ್ಯಸ್ಥರಾಗಿದ್ದು, ಬಿ.ಪಿ.ಟಿ. ಕಾಯ್ದೆ ಜಾರಿಯಲ್ಲಿರುವರೆಗೆ ಧರ್ಮದತ್ತಿ ಆಯುಕ್ತರು, ಬೆಳಗಾವಿ ಅವರೇ ಸರ್ಕಾರದಿಂದ ಮಂಜೂರಾದ ಅನುದಾನ ಹಣ ಬಿಡುಗಡೆ ಮಾಡುವ ಅಧಿಕಾರಗಳಾಗಿರುತ್ತಾರೆ.

ಇ) ಮಂಜೂರಾದ ಹಣ ಧರ್ಮದತ್ತಿ ಆಯುಕ್ತರ ಸುಬರ್ಧಿನಲ್ಲಿ ಇರುತ್ತದೆ. ಟ್ರಸ್ಟ್ ನೋಂದಾಯಿಸಿದ ನಂತರ ಹಣ ಬಿಡುಗಡೆ ಮಾಡಲು ಅವಕಾಶವಿದೆ.

ನಕಲಿ ಲಾಟರಿ ಟಿಕೇಟುಗಳ ಮಾರಾಟ

3288 - ಶ್ರೀ ಪಾಟೀಲ್ ಜೆ.ಟಿ. (ಬೀಳಗಿ) : ಮಾನ್ಯ ಸಣ್ಣ ಉಳಿತಾಯ, ಮುಜರಾಯಿ ಮತ್ತು ವಿಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಾಟರಿ ಯೋಜನೆ ಅಡಿಯಲ್ಲಿ ನಕಲಿ ಟಿಕೇಟುಗಳು ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಲಾಟರಿ ಯೋಜನೆಯಿಂದ)

ಆ) ಇದರಿಂದ ಸರ್ಕಾರಕ್ಕೆ ಪ್ರತಿ ವರ್ಷ ಬರುವ ಆದಾಯವೆಷ್ಟು?

ಇ) ನಕಲಿ ಟಿಕೇಟುಗಳನ್ನು ಕೊಳ್ಳುವುದರಿಂದ ಸಾರ್ವಜನಿಕರಿಗೆ ಆಗುವ ಹಾನಿ ಎಷ್ಟು?

ಈ) ಲಾಟರಿ ಯೋಜನೆಯನ್ನು ಸಂಪೂರ್ಣವಾಗಿ ನಿಷೇಧಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಬಾಬುರಾವ್ ಚಿಂಚನಸೂರ್ (ಸಣ್ಣ ಉಳಿತಾಯ, ಮುಜರಾಯಿ ಹಾಗೂ ವಿಮೆ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

ಜಾಗತಿಕ ಬ್ಯಾಂಕ್ ಯೋಜನೆಯಡಿಯಲ್ಲಿ ಕೆರೆಗಳ ಹೂಳು ತೆಗೆಯುವ ಕಾರ್ಯಕ್ರಮ

3289 - ಶ್ರೀ ಪಾಟೀಲ್ ಜೆ.ಟಿ. (ಬೀಳಗಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಜಾಗತಿಕ ಬ್ಯಾಂಕ್ ಯೋಜನೆ ಅಡಿಯಲ್ಲಿ ಕೆರೆಗಳ ಹೂಳು ತೆಗೆಯುವ ಕಾರ್ಯಕ್ರಮ ಎಂದು ಪ್ರಾರಂಭಿಸಲಾಗುವುದು?